

ಬಂದು ಜೊಂಡಿನ ಕಡ್ಡಿಗಳ ಮೇಲೆ ಕೂತು ಸುದೀರ್ಘ ವಿಶ್ರಾಂತಿ ಪಡೆಯುತ್ತಿತ್ತು. ಅದರಂತೆ ಸಾಕಷ್ಟು ಚಿಟ್ಟೆಗಳು ಕೂತಿದ್ದವು.

ಹಕ್ಕಿಗಳ ಫೋಟೊ ಬಿಟ್ಟು ಇವುಗಳನ್ನೇ ನೋಡುತ್ತಾ ಕೂತೆ. ಅವು ಬಾಲದಲ್ಲಿ ನೀರು ತಟ್ಟದ ಜಾಗೆಯನ್ನು ನೋಡಿದೆ. ಗಸಗಸೆ ಕಾಳಿನ ಗಾತ್ರದ ಸಣ್ಣ ಮೊಟ್ಟೆಗಳು ತೇಲುತ್ತಿದ್ದವು. ಓಹೋ ಇವು ನೀರ ಮೇಲೆ ಮೊಟ್ಟೆ ಇಡಲು ಈ ಪಾಟಿ ಸರ್ಕಸ್ ಮಾಡುತ್ತಿವೆ ಎಂದು ಗೊತ್ತಾಯಿತು. ಈ ಏರೋಪ್ಲೇನ್ ಚಿಟ್ಟೆಗಳು ಹೆಚ್ಚೆಂದರೆ ಒಂದೂವರೆ ತಿಂಗಳು ಮಾತ್ರ ಬದುಕಿರುತ್ತವೆ. ಅದಕ್ಕೂ ಮೊದಲು ಲಾರ್ವ ರೂಪದಲ್ಲಿರುತ್ತವೆ. ಇವುಗಳ ಮುಖ್ಯ ಆಹಾರ ಆಗಸದಲ್ಲಿ ಆಗಷ್ಟೇ ನೆಲದಿಂದ ಎದ್ದು ಬಂದು ಸಂತಸದಿಂದ ಹಾರಾಡುವ ಮಳೆ ಹುಳಗಳು. ಅವುಗಳನ್ನು ಬೆನ್ನಟ್ಟಿ ಕೊಂದು ಹೊಟ್ಟೆಯ ಭಾಗದ ಮೃದುವಾದ ಮಾಂಸ ತಿಂದು ಬಿಸಾಡುತ್ತವೆ. ಇದೇ ಸಮಯದಲ್ಲಿ ತಿಂದುಂಡು ಕೊಬ್ಬಿರುವ ಈ ಚಿಟ್ಟೆಗಳ ಹಿಡಿದು ತಿನ್ನುವ ಕಾಂಟ್ರಾಕ್ಟನ್ನು ನಿಸರ್ಗ ಬೀ ಈಟರ್ ಎಂಬ ಹಕ್ಕಿಗಳಿಗೆ ಕೊಟ್ಟಿದೆ. ತಮ್ಮ ಮರಿಗಳಿಗೆ ಏರೋಪ್ಲೇನ್ ಚಿಟ್ಟೆಗಳ ಹಿಡಿದು ತಿನ್ನಿಸಲು ಜತೆಗೆ ತಾವೂ ಭಕ್ಷಿಸಲು ಜೇನುನೊಣ ತಿನ್ನುವ ಈ ಹಕ್ಕಿಗಳಿಗೆ ಇದೇ ಸಕಾಲ.

ಆಹಾರದ ಸರಪಳಿಯ ಈ ಕ್ರಮಬದ್ಧ ಜೋಡಣೆಯೇ ಸೋಜಿಗ. ಮಳೆ ಹುಳ ಹುಟ್ಟಿ ಬರುವ ಸಮಯಕ್ಕಾಗಿ ಏರೋಪ್ಲೇನ್ ಚಿಟ್ಟೆ ಕಾಯುವುದು. ಏರೋಪ್ಲೇನ್ ಚಿಟ್ಟೆ ಬಲಿತ ಸಮಯಕ್ಕೆ ಸರಿಯಾಗಿ ಜೇನುನೊಣ ಹಿಡುಕ ಮೊಟ್ಟೆ ಇಟ್ಟು ಮರಿಮಾಡಿಕೊಳ್ಳುವುದು. ಆಗ ಇದೇ ಬೀ ಈಟರ್ ಮರಿಗಳ ಹಿಡಿದು ಮುಕ್ಕಲು ಕೆಂಪು ಕಾಗೆ, ಹದ್ದುಗಳು, ನರಿಗಳು, ಹಾವುಗಳು ಹೊಂಚು ಹಾಕಿ ಕಾಯುವುದು. ಇವೆಲ್ಲವೂ ಪರಸ್ಪರ ಅವಲಂಬಿತ ಆಹಾರ ಮೇಳ. ಸೃಷ್ಟಿ ಸೂಚಿಸಿರುವ ಒಪ್ಪಂದಿತ ಬದುಕಿನ ರಚನೆ. ಆಹಾರದ ಈ ಮ್ಯಾರಾಥಾನ್ ಸರಪಳಿಯಲ್ಲಿ ಒಂದು ಜೀವಿ ನಾಶವಾದರೂ ಮತ್ತೊಂದು ಹಸಿವಿನಿಂದ ಸಾಯುತ್ತದೆ. ಎಲ್ಲರೂ ಆಗಾಗ ಹೀಗೆ ಬೇರೆಯವರಿಗಾಗಿ ಸಾಯಬೇಕು. ಮತ್ತೊಬ್ಬರಿಗಾಗಿ ಹುಟ್ಟುತ್ತಲೇ ಇರಬೇಕು. ಹುಟ್ಟು ಸಾವುಗಳಲ್ಲಿ ಸಮಾನವಾಗಿದೆ. ಒಬ್ಬರಿಗಾಗಿ ಮತ್ತೊಬ್ಬರು ಬದುಕ ಬದಲಿಸಬೇಕೆಂಬ ಕಠೋರ ಸತ್ಯ ಪ್ರಕೃತಿಯಲ್ಲಿ ಎಷ್ಟೊಂದು ಸರಳವಾಗಿ ಹೆಣೆಯಲ್ಪಟ್ಟಿದೆ. ●